# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : (160)10

ಸದಸ್ಯರ ಹೆಸರು : ಶ್ರೀಮತಿ ಬಲ್ಕೀಸ್ ಬಾನು

ಉತ್ತರಿಸಬೇಕಾದ ದಿನಾಂಕ : 17.08.2026

ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2026 -27 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ಎಷ್ಟು ವಿದ್ಯಾರ್ಥಿಗಳಿಗೆ ಉಚಿತ ಶೂ ಮತ್ತು ಸಾಕ್ಸ್ ವಿತರಿಸಲು ಅನುಮೋದನೆ ನೀಡಲಾಗಿದೆ. ಸಮಯಕ್ಕೆ ಸರಿಯಾಗಿ ವಿತರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಜಿಲ್ಲಾವಾರು ವಿವರ ನೀಡುವುದು) | 2026-27ನೇ ಶೈಕ್ಷಣಿಕ ಸಾಲಿನಲ್ಲಿ ವಿದ್ಯಾವಿಕಾಸ ಯೋಜನೆಯಡಿ ರಾಜ್ಯದಲ್ಲಿನ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಂದಾಜು 36.56 ಲಕ್ಷ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಒಂದು ಜೊತೆ ಕಪ್ಪು ಶೂ ಮತ್ತು ಎರಡು ಜೊತೆ ಸಾಕ್ಸ್‌ಗಳನ್ನು, ಅಧಿಕ ಮಳೆಯಾಗುವ ಪ್ರದೇಶದ ಶಾಲೆಗಳ ಎಸ್.ಡಿ.ಎಂ.ಸಿ.ಗಳು ತಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಶೂ ಬದಲು ಪಾದರಕ್ಷೆಗಳು(ಸ್ಯಾಂಡಲ್‌ಗಳು) ಕೋರಿದಲ್ಲಿ ಮಾತ್ರ ಅಂತಹ ಶಾಲೆಗಳ ವಿದ್ಯಾರ್ಥಿಗಳಿಗೆ ಶೂಗಳ ಬದಲು ಉತ್ತಮ ಗುಣಮಟ್ಟದ ವೆಲ್‌ಕ್ರೋ ಪಾದರಕ್ಷೆಗಳನ್ನು (Velcro Sandals) ಕೆ.ಟಿ.ಪಿ.ಪಿ.ಕಾಯ್ದೆ 1999 ಮತ್ತು ಅದರಡಿ ರೂಪಿಸಲಾದ ನಿಯಮಗಳನ್ವಯ ಪಾರದರ್ಶಕ ಟೆಂಡರ್ ಮೂಲಕ ಅಂದಾಜು ವೆಚ್ಚ ರೂ.104.00 ಕೋಟಿಗಳಲ್ಲಿ (ಒಂದು ನೂರ ನಾಲ್ಕು ಕೋಟಿ ರೂಪಾಯಿಗಳು ಮಾತ್ರ) ರಾಜ್ಯಮಟ್ಟದಲ್ಲಿ ಖರೀದಿಸಿ 2026-27ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ವಿದ್ಯಾರ್ಥಿಗಳಿಗೆ ಶೂ-ಸಾಕ್ಸ್ ಮತ್ತು ಪಾದರಕ್ಷೆ (Velcro Sandals) ಗಳನ್ನು ವಿತರಣೆ ಮಾಡಲು ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಿ ಆದೇಶಿಸಲಾಗಿದೆ.<br><br>ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ವಿದ್ಯಾವಿಕಾಸ ಯೋಜನೆಯಡಿ ಉಚಿತ ಶೂ-ಸಾಕ್ಸ್ ವಿತರಣೆ ಮಾಡಲಾಗುತ್ತಿಲ್ಲ.<br><br>ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಹಂತದಲ್ಲಿ ಸರ್ಕಾರಿ ಶಾಲೆಗಳ 1 ರಿಂದ 10 ನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತ ಶೂ-ಸಾಕ್ಸ್ ಮತ್ತು ಪಾದರಕ್ಷೆಗಳನ್ನು, ಸಮಯಕ್ಕೆ ಸರಿಯಾಗಿ ವಿತರಿಸಲು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ವರದಿ ಸಲ್ಲಿಸಿರುತ್ತಾರೆ<br><br>• 2026-27ನೇ ಸಾಲಿನಲ್ಲಿ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಸುಮಾರು 36.01 ಲಕ್ಷ |

2. ವಿದ್ಯಾರ್ಥಿಗಳಿಗೆ ಒಂದು ಜೋಡಿ ಉತ್ತಮ ಗುಣಮಟ್ಟದ ಶೂಗಳು, ಎರಡು ಜೋಡಿ ಸಾಕ್ಸ್ ಹಾಗೂ ಶಾಲಾ ಎಸ್.ಡಿ.ಎಂ.ಸಿ.ಗಳು ಮನವಿ ಸಲ್ಲಿಸಿದ್ದಲ್ಲಿ ಅಂತಹ ಶಾಲೆಗಳ ವಿದ್ಯಾರ್ಥಿಗಳಿಗೆ ಪಾದರಕ್ಷೆ (Velcro Sandals) ಗಳನ್ನು ಕೆ.ಟಿ.ಪಿ.ಪಿ.ಕಾಯ್ದೆ 1999 ಮತ್ತು ಅದರಡಿ ರೂಪಿಸಲಾದ ನಿಯಮಗಳನ್ವಯ ಪಾರದರ್ಶಕ ಟೆಂಡರ್ ಮೂಲಕ ಖರೀದಿಸಿ ವಿತರಿಸಲು ಕ್ರಮವಹಿಸಲಾಗಿದೆ.

3. ಟೆಂಡರ್ ಷರತ್ತು ಮತ್ತು ನಿಬಂಧನೆಗಳಂತೆ ಸೆಕ್ಷನ್ 4 (3) ರನ್ವಯ ಸರಬರಾಜು ವೇಳಾಪಟ್ಟಿಯಂತೆ ಕಾರ್ಯಾದೇಶ ನೀಡಿದ 60 ದಿನಗಳ ಒಳಗಾಗಿ ಸರಬರಾಜನ್ನು ಪೂರ್ಣಗೊಳಿಸಬೇಕೆಂಬ ಷರತ್ತನ್ನು ವಿಧಿಸಲಾಗಿದೆ ಮತ್ತು ಸರಬರಾಜು ಮಾಡಿರುವ ಶೂ-ಸಾಕ್ಸ್ ಮತ್ತು ಸ್ಯಾಂಡಲ್ಸ್ ಗಳ ಅಳತೆಯಲ್ಲಿ ವ್ಯತ್ಯಾಸಗಳು ಕಂಡುಬಂದಲ್ಲಿ ಮುಂದಿನ 15 ದಿನಗಳ ಒಳಗಾಗಿ ಬದಲಾಯಿಸಿ ಕೊಡುವ ಷರತ್ತನ್ನು ಅಳವಡಿಸಲಾಗಿದೆ ಎಂದು ಆಯುಕ್ತರು ತಿಳಿಸಿರುತ್ತಾರೆ.

4. ಅರ್ಹ ಸಂಸ್ಥೆಗಳಿಗೆ ದಿನಾಂಕ 29-05-2026 ರಂದು ನೀಡಿದ ಕಾರ್ಯಾದೇಶದಲ್ಲಿ ದಿನಾಂಕ:31-07-2026 ರ ಒಳಗಾಗಿ ಶೂ-ಸಾಕ್ಸ್ ಮತ್ತು ಸ್ಯಾಂಡಲ್ಸ್ ಗಳನ್ನು ತಾಲ್ಲೂಕುಗಳಿಗೆ ಸರಬರಾಜು ಮಾಡಲು ತಿಳಿಸಲಾಗಿರುತ್ತದೆ

5. ಒಂದು ವೇಳೆ ನಿಗದಿತ ಅವಧಿಯಲ್ಲಿ ಸರಬರಾಜುದಾರ ಸಂಸ್ಥೆಗಳು ಸರಬರಾಜು ಮಾಡದಿದ್ದಲ್ಲಿ 0.75% ರಷ್ಟು ವಿಳಂಬ ದಂಡವನ್ನು ಪ್ರತಿ ವಾರಕ್ಕೆ ಅನ್ವಯವಾಗುವಂತೆ ಷರತ್ತನ್ನು ವಿಧಿಸಲಾಗಿದೆ. ಪ್ರಗತಿ ಪರಿಶೀಲನೆಗೆ ದಿನಾಂಕ: 24-06-2026, ಮತ್ತು ದಿನಾಂಕ: 08-07-2026 ರಲ್ಲಿ ಇಲಾಖಾ ಅಧಿಕಾರಿಗಳ ತಂಡಗಳನ್ನು ರಚಿಸಿದ್ದು, ಪ್ರತಿದಿನ ಶೂ-ಸಾಕ್ಸ್ ಮತ್ತು ಸ್ಯಾಂಡಲ್ಸ್ ಗಳನ್ನು ಸರಬರಾಜು ಮಾಡಿರುವ ತಾಲ್ಲೂಕುಗಳಿಂದ ಹಾಗೂ ಸರಬರಾಜುದಾರರಿಂದ ಮಾಹಿತಿಯನ್ನು ಪಡೆಯಲಾಗುತ್ತಿದೆ

6. ಕಾರ್ಯಾದೇಶದಲ್ಲಿ ಪ್ರತಿ ಶಾಲೆಗೆ ವಿತರಿಸುವ ಶೂ-ಸಾಕ್ಸ್ ಮತ್ತು ಸ್ಯಾಂಡಲ್ಸ್ ಗಳನ್ನು ವಿದ್ಯಾರ್ಥಿಗಳ ಕಾಲಳತೆಗೆ ಅನುಗುಣವಾಗಿ ಶಾಲಾವಾರು ವಿಂಗಡಣೆ ಮಾಡಿ ವಿತರಿಸುವ ಷರತ್ತನ್ನು ವಿಧಿಸಲಾಗಿದ್ದು, ಅದರಂತೆ ಸರಬರಾಜುದಾರರು ಶಾಲಾವಾರು, ವಿದ್ಯಾರ್ಥಿವಾರು ಅಳತೆಯನುಸಾರ ವಿಂಗಡಿಸುವಲ್ಲಿ ಹೆಚ್ಚುವರಿ ಕಾಲಾವಕಾಶ ಬೇಕಾಗಿರುವ ಬಗ್ಗೆ ಕೋರಿರುತ್ತಾರೆ ಎಂದು ತಿಳಿಸಿರುತ್ತಾರೆ.

7. ದಿನಾಂಕ:03-08-2026 ಮತ್ತು ದಿನಾಂಕ:04-08-2026 ರಂದು ಇಲಾಖಾಧಿಕಾರಿಗಳನ್ನು ನಿಯೋಜಿಸಿ ಸರಬರಾಜುದಾರ ಸಂಸ್ಥೆಗಳ ಉತ್ಪಾದನಾ ಸಂಸ್ಥೆಗಳಿಗೆ ಭೇಟಿ ನೀಡಿ ಶೂ-ಸಾಕ್ಸ್ ಮತ್ತು ಸ್ಯಾಂಡಲ್ಸ್ ಗಳ ಉತ್ಪಾದನೆ ಮತ್ತು ಸರಬರಾಜಿಗೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನೆ ಮಾಡಿ ವರದಿ ಪಡೆಯಲಾಗಿದೆ ಎಂದು ತಿಳಿಸಿರುತ್ತಾರೆ.

8. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (KTPP) ಕಾಯಿದೆ ಮತ್ತು ನಿಯಮಗಳ ನಿಬಂಧನೆಗಳಿಗೆ ಅನುಗುಣವಾಗಿ ತಾಂತ್ರಿಕ ವಿಶೇಷತೆಗಳು ಮತ್ತು ಗುಣಮಟ್ಟದ ಮಾನದಂಡಗಳನ್ನು ಕಡ್ಡಾಯವಾಗಿ ಪಾಲಿಸಿ ಶೂ-ಸಾಕ್ಸ್ ಮತ್ತು ಸ್ಯಾಂಡಲ್ಸ್‌ಗಳ ಖರೀದಿಯನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ.
9. ಉತ್ತಮ ಗುಣಮಟ್ಟದ ಉತ್ಪನ್ನಗಳ ಖರೀದಿಯನ್ನು ಖಚಿತಪಡಿಸಿಕೊಳ್ಳಲು ಕೇಂದ್ರ ಸರ್ಕಾರದ Footwear Design & Development Institute (FDDI), ಭಾರತೀಯ ವಿಜ್ಞಾನ ಸಂಸ್ಥೆ (ಐ.ಐ.ಎಸ್.ಸಿ.) ಬೆಂಗಳೂರು , National Institute of Technology Karnataka (NITK), ಸುರತ್ಕಲ್, ಲಿಡ್‌ಕರ್ (LIDKAR) ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೊಂಡ ಉನ್ನತ ಮಟ್ಟದ ತಾಂತ್ರಿಕ ಸಮಿತಿಯನ್ನು ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಹಂತದಲ್ಲಿ ರಚಿಸಲಾಗಿದೆ ಎಂದು ತಿಳಿಸಿರುತ್ತಾರೆ.
10. ಶೂ-ಸಾಕ್ಸ್ ಮತ್ತು ಸ್ಯಾಂಡಲ್ಸ್ ಗಳ ಪೂರೈಕೆ ಆರಂಭಿಸುವ ಮೊದಲು ಪೂರ್ವ-ಸಾಗಣೆ ತಪಾಸಣೆ (pre-dispatch inspection) ನಡೆಸಲಾಯಿತು ಎಂದು ತಿಳಿಸಿರುತ್ತಾರೆ
11. ಶೂ-ಸಾಕ್ಸ್ ಮತ್ತು ಸ್ಯಾಂಡಲ್ಸ್ ಗಳ ಮಾದರಿಗಳನ್ನು ಪರೀಕ್ಷೆಗಾಗಿ Footwear Design & Development Institute (FDDI)ಗೆ ಸಲ್ಲಿಸಿ ವರದಿ ಪಡೆಯಲಾಗಿದೆ. ಎಫ್‌ಡಿಡಿಐ ನಿಂದ ತೃಪ್ತಿಕರವಾದ ಪರೀಕ್ಷಾ ವರದಿಗಳು ಬಂದ ನಂತರವೇ ಶೂ-ಸಾಕ್ಸ್ ಮತ್ತು ಸ್ಯಾಂಡಲ್ಸ್ ಗಳ ಸರಬರಾಜಿಗೆ ಅನುಮತಿ ನೀಡಲಾಗಿದೆ ಎಂದು ತಿಳಿಸಿರುತ್ತಾರೆ
12. ಗುಣಮಟ್ಟ ಮೇಲ್ವಿಚಾರಣೆಗಾಗಿ ಜಿಲ್ಲಾ ಮಟ್ಟ, ತಾಲೂಕು ಮಟ್ಟದ ಮತ್ತು ಶಾಲಾ ಮಟ್ಟದ ಸಮಿತಿಗಳನ್ನು ರಚಿಸಿ, ತಾಲ್ಲೂಕು ಮತ್ತು ಜಿಲ್ಲಾ ಹಂತಗಳಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಿಸಿ, ಜವಾಬ್ದಾರಿಗಳನ್ನು ನಿಗದಿಪಡಿಸಿ ಸುತ್ತೋಲೆ ಹೊರಡಿಸಲಾಗಿದೆ ಎಂದು ತಿಳಿಸಿರುತ್ತಾರೆ.
13. ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಶೂ-ಸಾಕ್ಸ್ ಮತ್ತು ಸ್ಯಾಂಡಲ್ಸ್ ಗಳನ್ನು ಹಂಚಿಕೆ ಮಾಡಲು ತಾಲ್ಲೂಕುವಾರು ನೋಡಲ್ ಅಧಿಕಾರಿಗಳ ಮೂಲಕ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿರುತ್ತಾರೆ.

ಜಿಲ್ಲಾವಾರು ಶೂ-ಸಾಕ್ಸ್ ಮತ್ತು ಸ್ಯಾಂಡಲ್ಸ್ ಗಳಿಗೆ ಕಾರ್ಯಾದೇಶ ನೀಡಲಾಗಿರುವ ಪ್ರಮಾಣದ ಮಾಹಿತಿಯನ್ನು **ಅನುಬಂಧ-1** ರಂತೆ ಸಲ್ಲಿಸಿದೆ

<table>
<tr>
<td>ಆ)</td>
<td>ಇದುವರೆಗೆ ಎಷ್ಟು ವಿದ್ಯಾರ್ಥಿಗಳಿಗೆ ಶೂ ಮತ್ತು ಸಾಕ್ಸ್ ಗಳನ್ನು ವಿತರಿಸಲಾಗಿದೆ ಎಷ್ಟು ವಿದ್ಯಾರ್ಥಿಗಳಿಗೆ ಇನ್ನೂ ವಿತರಿಸಬೇಕಾಗಿದೆ. (ಜಿಲ್ಲಾವಾರು ವಿವರ ನೀಡುವುದು)</td>
<td>ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರ ವರದಿಯಂತೆ ದಿನಾಂಕ. 10.08 2026 ರಲ್ಲಿದ್ದಂತೆ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಶೂ-ಸಾಕ್ಸ್ ಮತ್ತು ಸ್ಯಾಂಡಲ್ ಪೂರೈಕೆ ವಿವರ<br>
<table>
<tr><td>ಕಾರ್ಯಾದೇಶದ (Work Order) ಪ್ರಮಾಣ</td><td>36,61,267</td></tr>
<tr><td>ಶಾಲೆಗಳಿಗೆ ವಿತರಣೆ ಆಗಿರುವ ಪ್ರಮಾಣ</td><td>21,92,529</td></tr>
<tr><td>ತಾಲ್ಲೂಕುಗಳಿಗೆ ಸಾಗಣೆಯಲ್ಲಿರುವ ಪ್ರಮಾಣ</td><td>12,59,298</td></tr>
<tr><td>ಉತ್ಪಾದನಾ ಹಂತದಲ್ಲಿರುವ ಪ್ರಮಾಣ</td><td>2,09,440</td></tr>
<tr><td>ನಿರೀಕ್ಷಿತ ಪೂರ್ಣ ಪ್ರಮಾಣದ ವಿತರಣೆ</td><td>ದಿನಾಂಕ:25.08.2026 ರೊಳಗೆ</td></tr>
</table>
<br>ಜಿಲ್ಲಾವಾರು ವಿತರಣೆ ಮಾಹಿತಿಯನ್ನು ಅನುಬಂಧ-2 ರಲ್ಲಿ ಸಲ್ಲಿಸಿದೆ.</td>
</tr>
<tr>
<td>ಇ)</td>
<td>ಶೂ ಮತ್ತು ಸಾಕ್ಸ್ ಖರೀದಿಗಾಗಿ ಸರ್ಕಾರ ಬಿಡುಗಡೆ ಮಾಡಿದ ಅನುದಾನ ಎಷ್ಟು? ಇದುವರೆಗೆ ವೆಚ್ಚವಾದ ಮೊತ್ತವೆಷ್ಟು</td>
<td>2026-27ನೇ ಶೈಕ್ಷಣಿಕ ಸಾಲಿನಲ್ಲಿ ವಿದ್ಯಾವಿಕಾಸ ಯೋಜನೆಯಡಿ ರಾಜ್ಯದಲ್ಲಿನ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಂದಾಜು 36.56 ಲಕ್ಷ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶೂ-ಸಾಕ್ಸ್ ಮತ್ತು ಸ್ಯಾಂಡಲ್‌ಗಳನ್ನು ಅಂದಾಜು ವೆಚ್ಚ ರೂ.104.00 ಕೋಟಿಗಳಲ್ಲಿ (ಒಂದು ನೂರ ನಾಲ್ಕು ಕೋಟಿ ರೂಪಾಯಿಗಳು ಮಾತ್ರ) ಖರೀದಿಸಿ ವಿತರಿಸಲು ಅನುಮೋದನೆ ನೀಡಲಾಗಿದ್ದು, ಸದರಿ ಅನುದಾನವು ಆಡಳಿತ ಇಲಾಖೆಗೆ ಬಿಡುಗಡೆಯಾಗಿರುವುದಿಲ್ಲ.<br><br>ಎಲ್ಲಾ ಸರ್ಕಾರಿ ಶಾಲೆಗಳಿಗೆ ನಿಗದಿತ ಅವಧಿಯಲ್ಲಿ ಉತ್ತಮ ಗುಣಮಟ್ಟದ ಶೂ-ಸಾಕ್ಸ್ ಮತ್ತು ಸ್ಯಾಂಡಲ್ಸ್ ಗಳನ್ನು ಖರೀದಿಸಿ ವಿತರಿಸಿರುವ ಸಂಬಂಧ ವರದಿ ಮತ್ತು ಖರೀದಿಸಿರುವ ಶೂ-ಸಾಕ್ಸ್ ಮತ್ತು ಸ್ಯಾಂಡಲ್ ಗಳ ಗುಣಮಟ್ಟದ ವರದಿಯನ್ನು ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಂದ ಪಡೆದು ಪರಿಶೀಲಿಸಿ ನಂತರ ನಿಯಮಗಳಂತೆ ಅನುದಾನ ಬಿಡುಗಡೆಗೆ ಕ್ರಮವಹಿಸಲಾಗುವುದು<br><br>ಈವರೆವಿಗೂ ಶೂ-ಸಾಕ್ಸ್ ಮತ್ತು ಸ್ಯಾಂಡಲ್‌ಗಳ ಖರೀದಿಗೆ ಯಾವುದೇ ವೆಚ್ಚ ಭರಿಸಿರುವುದಿಲ್ಲ.</td>
</tr>
</table>

| | | |
|---|---|---|
| ಈ) | ಶೂ ಮತ್ತು ಸಾಕ್ಸ್ ವಿತರಣೆಯಲ್ಲಿ ವಿಳಂಬಕ್ಕೆ ಕಾರಣಗಳೇನು?<br><br>(ಜಿಲ್ಲಾವಾರು ವಿವರ ನೀಡುವುದು) | ಜಿಲ್ಲೆಗಳಿಗೆ ಶೂ ಮತ್ತು ಸಾಕ್ಸ್ ವಿತರಣೆಯಲ್ಲಿ ವಿಳಂಬಕ್ಕೆ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಈ ಕೆಳಕಂಡಂತೆ ವರದಿ ನೀಡಿರುತ್ತಾರೆ<br><br>1. ಟೆಂಡರ್ ಷರತ್ತುಗಳಂತೆ ಅರ್ಹ ಸಂಸ್ಥೆಗಳು ಎಲ್ಲಾ ತಾಲ್ಲೂಕುಗಳಿಗೆ ಶೂ-ಸಾಕ್ಸ್ ಮತ್ತು ಸ್ಯಾಂಡಲ್ಸ್ ಗಳನ್ನು ತಾಲ್ಲೂಕುಗಳಿಗೆ ಸರಬರಾಜು ಮಾಡಲು ದಿನಾಂಕ:31.07.2026 ರಂದು ಕೊನೆಯ ದಿನವಾಗಿದ್ದು, ದಿನಾಂಕ:15.08.2026 ರವರೆಗೆ ಜಿಲ್ಲೆಗಳಿಗೆ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಕಾಲಳತೆಗೆ ಅನುಗುಣವಾಗಿ ವ್ಯತ್ಯಾಸವಿದ್ದಲ್ಲಿ, ಬದಲಾಯಿಸಿ ವಿತರಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂದು ತಿಳಿಸಿರುತ್ತಾರೆ.<br><br>2. ಸರಬರಾಜುದಾರ ಸಂಸ್ಥೆಗಳು ಹಾಗೂ ನೋಡಲ್ ಅಧಿಕಾರಿಗಳೊಂದಿಗೆ ನಿರಂತರ ಅನುಪಾಲನೆ ಮಾಡಿ ಸಕಾಲದಲ್ಲಿ ಶೂ-ಸಾಕ್ಸ್ ಮತ್ತು ಸ್ಯಾಂಡಲ್‌ಗಳ ಸರಬರಾಜು ಮತ್ತು ವಿತರಣೆಗೆ ಕ್ರಮವಹಿಸಲಾಗುತ್ತಿದೆ ಎಂದು ತಿಳಿಸಿರುತ್ತಾರೆ.<br><br>3. ದಿನಾಂಕ:31.07.2026 ರವರೆಗೆ ಶಾಲೆಗಳಲ್ಲಿ ದಾಖಲಾತಿಗೆ ಅವಕಾಶ ನೀಡಿರುವುದರಿಂದ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಕಾಲಳತೆಗೆ ಅನುಗುಣವಾಗಿ ಸರಬರಾಜು ಮಾಡಲಾಗುತ್ತಿರುವುದರಿಂದ, ಒಂದು ವಾರದ ವಿಳಂಬ ಸಾಧ್ಯತೆ ಇದೆ ಎಂದು ತಿಳಿಸಿರುತ್ತಾರೆ.<br><br>4. ಟೆಂಡರ್ ಷರತ್ತುಗಳಂತೆ ನಿಗದಿತ ಅವಧಿಯಲ್ಲಿ ಸರಬರಾಜು ಮಾಡದೆ ಇದ್ದಲ್ಲಿ, ಅಂತಹ ಸಂಸ್ಥೆಗಳ ವಿರುದ್ಧ ಕೆ.ಟಿ.ಪಿ.ಪಿ ಕಾಯ್ದೆ ಅಡಿಯಲ್ಲಿ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿರುತ್ತಾರೆ.<br><br>5. ದಿನಾಂಕ: 25-08-2026 ರೊಳಗೆ ಎಲ್ಲಾ ಸರ್ಕಾರಿ ಶಾಲೆಗಳ 1 ರಿಂದ 10 ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶೂ-ಸಾಕ್ಸ್ ಮತ್ತು ಸ್ಯಾಂಡಲ್ಸ್ ಗಳನ್ನು ವಿತರಿಸಲು ಕ್ರಮ ವಹಿಸಲಾಗುತ್ತಿದೆ ಎಂದು ತಿಳಿಸಿರುತ್ತಾರೆ |

ಸಂಖ್ಯೆ: ಇಪಿ 81 ಎಂಸಿಡಿ 2026

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

# ಅನುಬಂಧ - 1

| Sl. No. | District name | WORK ORDER GIVEN |
|---|---|---|
| 1 | BAGALKOTE | 168151 |
| 2 | BELLARY | 113443 |
| 3 | BELAGAVI | 168141 |
| 4 | BELAGAVI CHIKKODI | 215414 |
| 5 | BENGALURU RURAL | 49993 |
| 6 | BENGALURU NORTH | 83023 |
| 7 | BENGALURU SOUTH | 125023 |
| 8 | BIDAR | 96379 |
| 9 | CHAMRAJANAGAR | 48863 |
| 10 | CHIKKABALLAPURA | 57485 |
| 11 | CHIKKAMAGALURU | 52111 |
| 12 | CHITRADURGA | 103507 |
| 13 | DAKSHINA KANNADA(sandals only) | 88263 |
| 14 | DAVANAGARE | 85060 |
| 15 | DHARWAD | 117670 |
| 16 | GADAG | 87314 |
| 17 | HASSAN | 70556 |
| 18 | HAVERI | 129539 |
| 19 | KALABURAGI | 205938 |
| 20 | KODAGU | 18254 |
| 21 | KOLAR | 68154 |
| 22 | KOPPALA | 168912 |
| 23 | MANDYA | 66216 |
| 24 | MYSURU | 123751 |
| 25 | RAICHUR | 224257 |
| 26 | RAMANAGARA | 46155 |
| 27 | SHIVAMOGGA | 66251 |
| | SHIVAMOGGA(sandals) | 36575 |
| 28 | TUMKUR | 75333 |
| 29 | TUMKUR MADHUGIRI | 56858 |
| 30 | UDUPI | 7085 |
| | UDUPI(sandals) | 46098 |
| 31 | UTTARA KANNADA(sandals only) | 41611 |
| 32 | UTTARAKANNADA SIRSI | 15841 |
| | UTTARAKANNADA SIRSI(sandals) | 46238 |
| 33 | VIJAYANAGARA | 128727 |
| 34 | VIJAYAPURA | 213459 |
| 35 | YADGIRI | 145619 |
| | GRAND TOTAL | 3661267 |

ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ.
ಬೆಂಗಳೂರು-560 001

ಅನುಬಂಧ – ೨

| Sl. No. | District name | WORK ORDER GIVEN | Number of shoe socks /sandals distributed | Number of shoe socks /sandals Transit | Under manufacture |
|---|---|---|---|---|---|
| 1 | BAGALKOTE | 168151 | 168151 | 0 | 0 |
| 2 | BELLARY | 113443 | 0 | 113443 | 0 |
| 3 | BELAGAVI | 168141 | 60259 | 107882 | 0 |
| 4 | BELAGAVI CHIKKODI | 215414 | 133761 | 81653 | 0 |
| 5 | BENGALURU RURAL | 49993 | 13456 | 36537 | 0 |
| 6 | BENGALURU NORTH | 83023 | 7507 | 75516 | 0 |
| 7 | BENGALURU SOUTH | 125023 | 125023 | 0 | 0 |
| 8 | BIDAR | 96379 | 78954 | 17425 | 0 |
| 9 | CHAMRAJANAGAR | 48863 | 0 | 48863 | 0 |
| 10 | CHIKKABALLAPURA | 57485 | 57485 | 0 | 0 |
| 11 | CHIKKAMAGALURU | 52111 | 49225 | 2886 | 0 |
| 12 | CHITRADURGA | 103507 | 103507 | 0 | 0 |
| 13 | DAKSHINA KANNADA(sandals only) | 88263 | 0 | 88263 | 0 |
| 14 | DAVANAGARE | 85060 | 82304 | 2756 | 0 |
| 15 | DHARWAD | 117670 | 109490 | 8180 | 0 |
| 16 | GADAG | 87314 | 16200 | 71114 | 0 |
| 17 | HASSAN | 70556 | 70556 | 0 | 0 |
| 18 | HAVERI | 129539 | 67742 | 61797 | 0 |
| 19 | KALABURAGI | 205938 | 112326 | 93612 | 0 |
| 20 | KODAGU | 18254 | 0 | | 18254 |
| 21 | KOLAR | 68154 | 0 | | 68154 |
| 22 | KOPPALA | 168912 | 79409 | 89503 | 0 |
| 23 | MANDYA | 66216 | 54638 | | 11578 |
| 24 | MYSURU | 123751 | 28050 | | 95701 |
| 25 | RAICHUR | 224257 | 0 | 224257 | 0 |
| 26 | RAMANAGARA | 46155 | 36763 | 9392 | 0 |
| 27 | SHIVAMOGGA | 66251 | 66251 | | 0 |
| | SHIVAMOGGA(sandals) | 36575 | 36513 | 62 | 0 |
| 28 | TUMKUR | 75333 | 75333 | 0 | 0 |
| 29 | TUMKUR MADHUGIRI | 56858 | 56858 | 0 | 0 |
| 30 | UDUPI | 7085 | 7085 | 0 | 0 |
| | UDUPI(sandals) | 46098 | 14976 | 31122 | 0 |
| 31 | UTTARA KANNADA(sandals only) | 41611 | 0 | 25858 | 15753 |
| 32 | UTTARAKANNADA SIRSI | 15841 | 15841 | 0 | 0 |
| | UTTARAKANNADA SIRSI(sandals) | 46238 | 46238 | 0 | 0 |
| 33 | VIJAYANAGARA | 128727 | 77857 | 50870 | 0 |
| 34 | VIJAYAPURA | 213459 | 195152 | 18307 | 0 |
| 35 | YADGIRI | 145619 | 145619 | 0 | 0 |
| | GRAND TOTAL | 3661267 | 2192529 | 1259298 | 209440 |